LIBRARY (stamp)

63421

**IV Semester B.Com. Examination, Sept./Oct. 2022**
**(CBCS Scheme)**
**COMMERCE**
**Paper – 4.3 : Advanced Corporate Accounting**

Time : 3 Hours | Max. Marks : 70

***Instruction :*** *Answers must be written **completely** either in **English** or in **Kannada** only.*

SECTION – A

1. Answer **any 5** questions. **Each** question carries **2** marks : **(2×5=10)**
   a) What is meant by premium on issue of shares ?
   b) State any two legal requirements with regard to redemption of preference shares under Companies Act.
   c) How would you treat liabilities not taken over by Transferee Company under acquisition ?
   d) What are the types of amalgamation ?
   e) What entry is passed when there is any increase in the value of any asset in case of internal reconstruction ?
   f) State the methods of calculating PC.
   g) What is Social Accounting ?

SECTION – B

Answer **any 3** questions. **Each** question carries **6** marks : **(3×6=18)**

2. A company had 5,000, 6% redeemable preference shares of ₹ 100 each fully paid. These shares were due for redemption on 31-3-21 at a premium of 10%. To carry out the redemption the company issued 1250 equity shares of ₹ 100 each at par. The company had a balance of ₹ 75,000 in securities premium account and ₹ 4,87,500 in Profit and Loss a/c. Pass necessary journal entries.

3. Archana Ltd. resorted to internal reconstruction. The scheme was as under :
   a) 80,000 Equity shares of ₹ 10 each fully paid to be converted into 40,000 equity shares of ₹ 5 each fully paid.
   b) 4,000, 12% pref. shares of ₹ 100 each fully paid to be converted into 40,000 equity shares of ₹ 5 each fully paid.
   c) 600, 15% debentures of ₹ 1,000 each to be discharged by the issue of 80,000 equity shares of ₹ 5 each fully paid.
   d) The amount so available be appropriated to write off the following :
   P and L A/c (Dr.) – ₹ 4,00,000, Goodwill – ₹ 2,00,000, Machinery – ₹ 1,50,000.
   Prepare Capital Reduction A/c.

P.T.O.

4. 'D' Ltd. was acquired by 'N' Ltd. The share capital of 'D' Ltd. was 4,000 shares of ₹ 100 each. 'N' Ltd. issued 2 shares of ₹ 60 each at ₹ 65 per share and also agreed to pay ₹ 2 in cash to the shareholders of 'D' Ltd. in exchange for one share in 'D' Ltd.

   D Ltd., sold in the open market 1/4th of the shares received from 'N' Ltd. at the average rate of ₹ 63 per share.

   a) Give the statement of purchase consideration.

   b) Ascertain the profit or loss made on sale of shares.

5. The following particulars relate to Prasad Ltd., which went into voluntary liquidation.

   Preferential Creditors ₹ 40,000, Debentures holders ₹ 1,00,000

   Assets realized ₹ 3,96,500, Liquidation expenses ₹ 10,000

   Unsecured creditors other than preferential creditors ₹ 3,20,000.

   You are required to prepare Liquidator's Final Statement of A/c allowing for his remuneration at 2% on assets realized.

6. Explain the need for Human Resource Accounting.

SECTION – C

Answer **any 3** questions. **Each** question carries **14** marks : **(3×14=42)**

7. The Balance Sheet of Spotlight Ltd. as on 31-3-22 is as follows :

| **Liabilities** | **₹** | **Assets** | **₹** |
|---|---|---|---|
| 60,000, 14% Red. Pref. shares of | | Machinery | 25,00,000 |
| ₹ 20 each | 12,00,000 | Furniture | 9,00,000 |
| 4,00,000 equity shares of ₹ 10 each | 40,00,000 | Investments | 3,50,000 |
| P and L a/c | 7,00,000 | Stock | 15,00,000 |
| Sundry Creditors | 11,00,000 | Debtors | 14,00,000 |
| | | Bank | 3,50,000 |
| | **70,00,000** | | **70,00,000** |

   Redeemable preference shares are redeemed at a premium of 5% on 1-4-22. In order to facilitate the redemption, it was decided to :

   a) Sell investments at a loss of ₹ 50,000

   b) To finance the redemption :

      i) P and L a/c to be utilized leaving the balance of ₹ 2,00,000.

      ii) Issue sufficient new equity shares of ₹ 10 each at a premium of ₹ 2 per share.

   Pass necessary journal entries and show the Balance Sheet after the redemption.

8. A Ltd., and B Ltd., agreed to amalgamate and form a new company called C Ltd. The Balance Sheet on the date of amalgamation was as under :

| Liabilities | A Ltd. ₹ | B Ltd. ₹ | Assets | A Ltd. ₹ | B Ltd. ₹ |
|---|---|---|---|---|---|
| Share capital | 1,00,000 | 1,40,000 | Fixed assets | 1,20,000 | 1,80,000 |
| Reserve | 1,70,000 | 1,00,000 | Stock | 60,000 | 1,10,000 |
| Creditors | 40,000 | 90,000 | Debtors | 80,000 | 1,30,000 |
| Bank Loan | – | 90,000 | Cash | 50,000 | – |
| | **3,10,000** | **4,20,000** | | **3,10,000** | **4,20,000** |

The purchase consideration was to be based on the net assets of the Co. but subject to an addition of ₹ 90,000 to compensate to A Ltd., for its super profits.

The shares of ₹ 10 each in C Ltd., were to be issued to A Ltd,. and B Ltd., at the premium of ₹ 5 per share and in proportion to the agreed net assets.

C Ltd., proceeded to issue to public 12,000 shares of ₹ 10 each at a price of ₹ 15 per share.

a) Calculate the number of shares issued to A Ltd., and B Ltd.

b) Pass opening entries in the books of C Ltd.

c) Prepare the amalgamated Balance Sheet.

9. The following is the Balance Sheet of Mangala Ltd. as on 31-3-22.

| Liabilities | ₹ | Assets | ₹ |
|---|---|---|---|
| 1,20,000 shares of ₹ 10 each | 12,00,000 | Land and Buildings | 9,00,000 |
| | | Machinery | 5,00,000 |
| Sundry Creditors | 3,00,000 | Stock | 1,70,000 |
| Bank overdraft | 2,80,000 | Debtors | 2,00,000 |
| | | P and L account | 10,000 |
| | **17,80,000** | | **17,80,000** |

The company went into voluntary liquidation and the assets are sold to Lakshmi Ltd. for ₹ 15,00,000, payable as to ₹ 6,00,000 in cash (which sufficed to discharge creditors and bank overdraft and pay the winding up expenses of ₹ 20,000) and the balance ₹ 9,00,000 by the allotment of 1,20,000 shares of ₹ 10 each of Lakshmi Ltd. ₹ 7.50 per share paid up to the share holders of Mangala Ltd.

Prepare necessary ledger accounts in the books of Mangala Ltd.

10. The Balance Sheet of P Co. stood as follows on 31-3-22.

| **Liabilities** | ₹ | **Assets** | ₹ |
|---|---|---|---|
| 19,000 Equity shares of | | Land and Buildings | 1,00,000 |
| ₹ 100 each | 19,00,000 | Machinery | 2,80,000 |
| Debentures | 1,00,000 | Stock | 3,70,000 |
| Creditors | 1,00,000 | Sundry Debtors | 1,80,000 |
| | | Goodwill | 2,00,000 |
| | | P and L a/c | 9,70,000 |
| | **21,00,000** | | **21,00,000** |

The Co. is to be reconstructed as follows :

a) Shares of ₹ 100 are to be reduced to an equal number of fully paid shares of ₹ 40 each.

b) To issue 1000 new shares of ₹ 40 each fully paid to debenture holders in full settlement.

c) The amount available is to be utilized in writing off the goodwill and P and L a/c and the balance in writing down the value of machinery.

d) Authorized capital of Co. is 20,000 shares of ₹ 100 each .

Give the necessary journal entries. Prepare a reconstructed Balance Sheet.

11. The capital of the X Ltd., was as follows :

4,000 ordinary shares of ₹ 100 each fully paid.

3,000 ordinary shares of ₹ 100 each ₹ 80 per share paid up.

1,000 preference shares of ₹ 100 each fully paid.

The various creditors amounted to ₹ 1,00,000. This included secured creditors worth ₹ 30,000. The liquidator's remuneration was worth ₹ 2,500. The liquidators made a call of ₹ 15/- share on the ordinary shares which were partly paid up. This was paid in full. He also realized all the assets amounting to ₹ 2,91,000.

Prepare the liquidators account showing the return to the share holders.

## ಕನ್ನಡ ಆವೃತ್ತಿ

### ವಿಭಾಗ – ಎ

1. ಈ ಕೆಳಗಿನ ಯಾವುದಾದರೂ **5** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಯೂ **2** ಅಂಕಗಳನ್ನು ಹೊಂದಿರುತ್ತದೆ : **(2×5=10)**

   a) ಷೇರುಗಳ ವಿತರಣೆಯ ಮೇಲಿನ ಪ್ರೀಮಿಯಂ ಎಂದರೇನು ?

   b) ಕಂಪನಿಗಳ ಅಧಿನಿಯಮದ ಅಡಿಯಲ್ಲಿ ಆದ್ಯತಾ ಷೇರುಗಳ ವಿಮೋಚನೆಗೆ ಸಂಬಂಧಿಸಿದಂತೆ ಯಾವುದಾದರೂ ಎರಡು ಕಾನೂನು ಅವಶ್ಯಕತೆಗಳನ್ನು ತಿಳಿಸಿ.

   c) ಸ್ವಾಧೀನದ ಅಡಿಯಲ್ಲಿ ಖರೀದಿ ಕಂಪನಿಯು ಸ್ವಾಧೀನಪಡಿಸಿಕೊಳ್ಳದ ಬಾಧ್ಯತೆಗಳನ್ನು ನೀವು ಹೇಗೆ ಪರಿಗಣಿಸುವಿರಿ ?

   d) ಸಂಯೋಜನೆಯ ವಿಧಗಳು ಯಾವುವು ?

   e) ಆಂತರಿಕ ಪುನರ್ನಿರ್ಮಾಣದ ಸಂದರ್ಭದಲ್ಲಿ ಯಾವುದೇ ಸ್ವತ್ತಿನ ಮೌಲ್ಯದಲ್ಲಿ ಹೆಚ್ಚಳವಾದಾಗ ರೋಜು ದಾಖಲೆಯನ್ನು ಹೇಗೆ ಬರೆಯುತ್ತೀರಿ ?

   f) ಖರೀದಿ ಬೆಲೆಯನ್ನು ಕಂಡುಹಿಡಿಯುವ ವಿಧಾನಗಳನ್ನು ತಿಳಿಸಿ.

   g) ಸಾಮಾಜಿಕ ಲೆಕ್ಕಶಾಸ್ತ್ರ ಎಂದರೇನು ?

### ವಿಭಾಗ – ಬಿ

ಈ ಕೆಳಗಿನ ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಯೂ **6** ಅಂಕಗಳನ್ನು ಹೊಂದಿರುತ್ತದೆ. **(3×6=18)**

2. ಒಂದು ಕಂಪನಿಯು ತಲಾ ₹ 100ರ ಪೂರ್ತಿ ಪಾವತಿಸಿದ ಮರು ಪಾವತಿಯ 5,000, 6% ಆದ್ಯತೆಯ ಷೇರುಗಳನ್ನು ಹೊಂದಿದೆ. ಈ ಷೇರುಗಳನ್ನು 31-3-21 ರಂದು 10% ಪ್ರೀಮಿಯಂನಲ್ಲಿ ಮರು ಪಾವತಿಸಲು ಬಾಕಿಯಿತ್ತು. ವಿಮೋಚನೆಯನ್ನು ಕೈಗೊಳ್ಳಲು ಕಂಪನಿಯು 1,250 ಸೌಮ್ಯ ಷೇರುಗಳನ್ನು ತಲಾ ₹ 100 ಗೆ ವಿತರಿಸಿತು. ಕಂಪನಿಯು ಷೇರು ಪ್ರೀಮಿಯಂ ಖಾತೆಯಲ್ಲಿ ₹ 75,000 ಮತ್ತು ಲಾಭ ಮತ್ತು ನಷ್ಟ ಖಾತೆಯಲ್ಲಿ ₹ 4,87,500 ಬ್ಯಾಲೆನ್ಸ್ ಹೊಂದಿತ್ತು. ಅಗತ್ಯ ರೋಜು ನಮೂದುಗಳನ್ನು ನೀಡಿ.

3. ಅರ್ಚನಾ ಲಿಮಿಟೆಡ್ ಆಂತರಿಕ ಪುನರ್ನಿರ್ಮಾಣಕ್ಕೆ ಮೊರೆ ಹೋಯಿತು. ಈ ಯೋಜನೆಯು ಈ ಕೆಳಕಂಡಂತಿತ್ತು :

   a) ₹ 10 ರ 80,000 ಸೌಮ್ಯ ಷೇರುಗಳನ್ನು ಸಂಪೂರ್ಣವಾಗಿ ಪಾವತಿಸಿದ ತಲಾ ₹ 5 ರ 40,000 ಸೌಮ್ಯ ಷೇರುಗಳಾಗಿ ಪರಿವರ್ತಿಸಲಾಗುತ್ತದೆ.

   b) 4,000, 12% ₹ 100 ರ ಆದ್ಯತೆಯ ಷೇರುಗಳನ್ನು ಸಂಪೂರ್ಣವಾಗಿ ಪಾವತಿಸಿದ ತಲಾ ₹ 5ರ 40,000 ಸೌಮ್ಯ ಷೇರುಗಳಾಗಿ ಪರಿವರ್ತಿಸಿ.

   c) ₹ 1,000 ರ 600, 15% ಸಾಲಪತ್ರಗಳನ್ನು ತಲಾ ₹ 5 ರ 80,000 ಸೌಮ್ಯ ಷೇರುಗಳ ವಿತರಣೆಯಿಂದ ಬಿಡುಗಡೆ ಮಾಡಲಾಗುತ್ತದೆ.

   d) ಹೀಗೆ ಲಭ್ಯವಿರುವ ಮೊತ್ತವನ್ನು ಈ ಕೆಳಗಿನವುಗಳನ್ನು ಕಡಿಮೆ ಮಾಡಲು ಬಳಸಿಕೊಳ್ಳಬೇಕು :
   ಲಾಭ-ನಷ್ಟ ಖಾತೆ (Dr.) – ₹ 4,00,000, ಸದ್ಭಾವನಾ – ₹ 2,00,000, ಯಂತ್ರೋಪಕರಣಗಳು – ₹ 1,50,000.

   ಬಂಡವಾಳ ಕಡಿತ ಖಾತೆಯನ್ನು ತಯಾರಿಸಿ.

4. 'ಡಿ' ಲಿಮಿಟೆಡ್‌ಅನ್ನು 'ಎನ್' ಲಿಮಿಟೆಡ್ ಸ್ವಾಧೀನಪಡಿಸಿಕೊಂಡಿತು. 'ಡಿ' ಲಿಮಿಟೆಡ್‌ನ ಷೇರು ಬಂಡವಾಳವು ತಲಾ ₹ 100ರ 4000 ಷೇರುಗಳನ್ನು ಹೊಂದಿತ್ತು. 'ಎನ್' ಲಿಮಿಟೆಡ್ ಪ್ರತಿ ಷೇರಿಗೆ ₹ 65 ನಂತೆ ತಲಾ ₹ 60ರ ₹ 2 ಷೇರುಗಳನ್ನು ವಿತರಿಸಿತು ಮತ್ತು 'ಡಿ' ಲಿಮಿಟೆಡ್‌ನ ಷೇರುದಾರರಿಗೆ ಒಂದು ಷೇರಿಗೆ ಬದಲಾಗಿ ₹ 2 ನಗದನ್ನು ಪಾವತಿಸಿತು.
'ಡಿ' ಲಿಮಿಟೆಡ್‌ನಲ್ಲಿ 'ಎನ್' ಲಿಮಿಟೆಡ್ ನಿಂದ ಪಡೆದ ಷೇರುಗಳ 1/4ನೇ ಭಾಗವನ್ನು ಮುಕ್ತ ಮಾರುಕಟ್ಟೆಯಲ್ಲಿ ಪ್ರತಿ ಷೇರಿಗೆ ಸರಾಸರಿ ₹ 63 ದರದಲ್ಲಿ ಮಾರಾಟ ಮಾಡಲು ಒಪ್ಪಿಕೊಂಡಿತು.
   a) ಕಂಪನಿಯ ಖರೀದಿ ಬೆಲೆಯನ್ನು ಕಂಡುಹಿಡಿಯಿರಿ.
   b) ಷೇರುಗಳ ಮಾರಾಟದ ಮೇಲೆ ಲಾಭ ಅಥವಾ ನಷ್ಟವನ್ನು ಕಂಡುಹಿಡಿಯಿರಿ.

5. ಈ ಕೆಳಗಿನ ವಿವರಗಳು ಪ್ರಸಾದ್ ಲಿಮಿಟೆಡ್‌ಗೆ ಸಂಬಂಧಿಸಿವೆ, ಅದು ಸ್ವಯಂಪ್ರೇರಿತ ದಿವಾಳಿತನಕ್ಕೆ ಹೋಯಿತು.
ಆದ್ಯತಾ ಸಾಲಿಗರು ₹ 40,000, ಸಾಲಪತ್ರ ಹೊಂದಿರುವವರು ₹ 1,00,000,
ವಸೂಲಾದ ಸ್ವತ್ತುಗಳು ₹ 3,96,500, ವಿಸರ್ಜನಾ ವೆಚ್ಚಗಳು ₹ 10,000.
ಆದ್ಯತಾ ಸಾಲಿಗರನ್ನು ಹೊರತುಪಡಿಸಿ ಅಸುರಕ್ಷಿತ ಸಾಲಿಗರು ₹ 3,20,000
ವಿಸರ್ಜನಾಧಿಕಾರಿಯ ಸಂಭಾವನೆ–ವಸೂಲಾದ ಸ್ವತ್ತುಗಳ ಮೇಲೆ 2%. ವಿಸರ್ಜನಾಧಿಕಾರಿಯ ಅಂತಿಮ ವಿವರಣಾ ಪಟ್ಟಿಯನ್ನು ಸಿದ್ಧಪಡಿಸಿ.

6. ಮಾನವ ಸಂಪನ್ಮೂಲ ಲೆಕ್ಕಶಾಸ್ತ್ರದ ಅಗತ್ಯವನ್ನು ವಿವರಿಸಿ.

## ವಿಭಾಗ – ಸಿ

ಈ ಕೆಳಗಿನ ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಯೂ **14** ಅಂಕಗಳನ್ನು ಹೊಂದಿರುತ್ತದೆ. **(3×14=42)**

7. ಸ್ಪಾಟ್ ಲೈಟ್ ಲಿಮಿಟೆಡ್‌ನ ಅಢಾವೆ ಪತ್ರ 31-3-22 ರಂತೆ ಈ ಕೆಳಗಿನಂತಿದೆ :

| ಜವಾಬ್ದಾರಿಗಳು | ₹ | ಆಸ್ತಿಗಳು | ₹ |
|---|---|---|---|
| 60,000, 14% ತಲಾ ₹ 20 ರ ಮರು ಪಾವತಿ ಆದ್ಯತೆಯ ಷೇರುಗಳು | 12,00,000 | ಯಂತ್ರೋಪಕರಣಗಳು | 25,00,000 |
| 4,00,000, ತಲಾ ₹ 10 ರ ಸೌಮ್ಯ ಷೇರುಗಳು | 40,00,000 | ಪೀಠೋಪಕರಣಗಳು | 9,00,000 |
| ಲಾಭ–ನಷ್ಟ ಖಾತೆ | 7,00,000 | ಹೂಡಿಕೆಗಳು | 3,50,000 |
| ಒಟ್ಟು ಸಾಲಿಗರು | 11,00,000 | ದಾಸ್ತಾನು | 15,00,000 |
| | | ಋಣಿಗಳು | 14,00,000 |
| | | ಬ್ಯಾಂಕ್ ಶಿಲ್ಕು | 3,50,000 |
| | **70,00,000** | | **70,00,000** |

ಮರು ಪಾವತಿ ಮಾಡಬಹುದಾದ ಆದ್ಯತೆಯ ಷೇರುಗಳನ್ನು 1-4-22 ರಂದು 5% ಪ್ರೀಮಿಯಂನಲ್ಲಿ ಮರು ಪಾವತಿ ಮಾಡಲಾಗುತ್ತದೆ. ವಿಮೋಚನೆಯನ್ನು ಸುಗಮಗೊಳಿಸುವ ಸಲುವಾಗಿ, ಈ ಕೆಳಕಂಡವುಗಳನ್ನು ಮಾಡಲು ನಿರ್ಧರಿಸಲಾಯಿತು :
   a) ₹ 50,000 ನಷ್ಟದಲ್ಲಿ ಹೂಡಿಕೆಗಳನ್ನು ಮಾರಾಟ ಮಾಡಿ
   b) ವಿಮೋಚನೆಗೆ ಹಣಕಾಸು ಒದಗಿಸಲು :
      i) ಲಾಭ–ನಷ್ಟ ಖಾತೆ ₹ 2,00,000 ಬಾಕಿಯನ್ನು ಬಿಟ್ಟು ಮಿಕ್ಕಿದ್ದನ್ನು ಬಳಸಬೇಕು.
      ii) ಪ್ರತಿ ಷೇರಿಗೆ ₹ 2 ರ ಪ್ರೀಮಿಯಂನಲ್ಲಿ ತಲಾ ₹ 10 ರ ಸಾಕಷ್ಟು ಹೊಸ ಸೌಮ್ಯ ಷೇರುಗಳನ್ನು ವಿತರಿಸಿ.
      ಅಗತ್ಯವಿರುವ ರೋಜು ದಾಖಲೆಗಳನ್ನು ಬರೆದು, ವಿಮೋಚನೆಯ ನಂತರ ಅಢಾವೆ ಪತ್ರವನ್ನು ತೋರಿಸಿ.

8. ಎ ಲಿಮಿಟೆಡ್ ಮತ್ತು ಬಿ ಲಿಮಿಟೆಡ್ ಸೇರಿ ಸಿ ಕಂಪನಿ ಲಿಮಿಟೆಡ್ ಎಂಬ ಹೊಸ ಕಂಪನಿಯನ್ನು ವಿಲೀನಗೊಳಿಸಲು ಮತ್ತು ರಚಿಸಲು ಒಪ್ಪಿಕೊಂಡಿದೆ. ವಿಲೀನದ ದಿನಾಂಕದಂದು ಆಢಾವೆ ಪತ್ರ ಈ ಕೆಳಗಿನಂತಿತ್ತು :

| ಜವಾಬ್ದಾರಿಗಳು | ಎ ಲಿಮಿಟೆಡ್ ₹ | ಬಿ ಲಿಮಿಟೆಡ್ ₹ | ಆಸ್ತಿಗಳು | ಎ ಲಿಮಿಟೆಡ್ ₹ | ಬಿ ಲಿಮಿಟೆಡ್ ₹ |
|---|---|---|---|---|---|
| ಷೇರು ಬಂಡವಾಳ | 1,00,000 | 1,40,000 | ಸ್ಥಿರ ಆಸ್ತಿಗಳು | 1,20,000 | 1,80,000 |
| ಮೀಸಲು | 1,70,000 | 1,00,000 | ದಾಸ್ತಾನು | 60,000 | 1,10,000 |
| ಸಾಲಿಗರು | 40,000 | 90,000 | ಋಣಿಗಳು | 80,000 | 1,30,000 |
| ಬ್ಯಾಂಕ್ ಸಾಲ | – | 90,000 | ನಗದು | 50,000 | – |
| | **3,10,000** | **4,20,000** | | **3,10,000** | **4,20,000** |

ಖರೀದಿ ಬೆಲೆಯು ಕಂಪನಿಯ ನಿವ್ವಳ ಸ್ವತ್ತುಗಳನ್ನು ಆಧರಿಸಿರಬೇಕು, ಆದರೆ ಎ ಲಿಮಿಟೆಡ್‌ಗೆ ಅದರ ಸೂಪರ್ ಲಾಭಗಳಿಗಾಗಿ ಸರಿದೂಗಿಸಲು ₹ 90,000 ಹೆಚ್ಚುವರಿಯಾಗಿ ಕೊಡಬೇಕು.

ಸಿ ಲಿಮಿಟೆಡ್‌ನಲ್ಲಿನ ತಲಾ ₹ 10 ರ ಷೇರುಗಳನ್ನು ಎ ಲಿಮಿಟೆಡ್, ಮತ್ತು ಬಿ ಲಿಮಿಟೆಡ್‌ಗೆ ತಲಾ ₹ 5 ರಂತೆ ಪ್ರೀಮಿಯಂನಲ್ಲಿ ಮತ್ತು ಒಪ್ಪಿತ ನಿವ್ವಳ ಸ್ವತ್ತುಗಳ ಅನುಪಾತದಲ್ಲಿ ನೀಡಬೇಕು. ಸಿ ಲಿಮಿಟೆಡ್‌ನಲ್ಲಿನ ₹ 10 ರ, 12,000 ಷೇರುಗಳನ್ನು ಪ್ರತಿ ಷೇರಿಗೆ ತಲಾ ₹ 15 ರಂತೆ ಸಾರ್ವಜನಿಕರಿಗೆ ವಿತರಿಸಲು ಮುಂದಾಯಿತು.

a) ಎ ಲಿಮಿಟೆಡ್ ಮತ್ತು ಬಿ ಲಿಮಿಟೆಡ್ ಗೆ ನೀಡಲಾದ ಷೇರುಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

b) ಸಿ ಲಿಮಿಟೆಡ್‌ನ ಪುಸ್ತಕಗಳಲ್ಲಿ ಆರಂಭಿಕ ರೋಜು ದಾಖಲೆಗಳನ್ನು ಬರೆಯಿರಿ.

c) ಸಂಯೋಜಿಸಿದ ಆಢಾವೆ ಪತ್ರವನ್ನು ತಯಾರಿಸಿರಿ.

9. ಮಂಗಳಾ ಲಿಮಿಟೆಡ್‌ನ ಆಢಾವೆ ಪತ್ರ 31-3-22 ರಂತೆ ಈ ಕೆಳಗಿನಂತಿದೆ.

| ಜವಾಬ್ದಾರಿಗಳು | ₹ | ಆಸ್ತಿಗಳು | ₹ |
|---|---|---|---|
| ತಲಾ ₹ 10 ರ 1,20,000 | | ಭೂಮಿ ಮತ್ತು ಕಟ್ಟಡಗಳು | 9,00,000 |
| ಷೇರುಗಳು | 12,00,000 | ಯಂತ್ರೋಪಕರಣಗಳು | 5,00,000 |
| ಒಟ್ಟು ಸಾಲಿಗರು | 3,00,000 | ದಾಸ್ತಾನು | 1,70,000 |
| ಬ್ಯಾಂಕಿನ ಮೀರಳತೆ | 2,80,000 | ಋಣಿಗಳು | 2,00,000 |
| | | ಲಾಭ-ನಷ್ಟ ಖಾತೆ | 10,000 |
| | **17,80,000** | | **17,80,000** |

ಖರೀದಿ ಪರಿಗಣನೆಯು ಹೀಗಿದೆ :

ಕಂಪನಿಯು ಸ್ವಯಂಪ್ರೇರಿತ ದಿವಾಳಿಯಾಯಿತು ಮತ್ತು ಸ್ವತ್ತುಗಳನ್ನು ಲಕ್ಷ್ಮಿ ಲಿಮಿಟೆಡ್‌ಗೆ ₹ 15,00,000 ಕ್ಕೆ ಮಾರಾಟ ಮಾಡಲಾಗುತ್ತದೆ. ಲಕ್ಷ್ಮಿ ಲಿಮಿಟೆಡ್ ₹ 6,00,000 ನಗದು (ಇದು ಸಾಲಿಗರು, ಬ್ಯಾಂಕಿನ ಮೀರಳತೆ ಅನ್ನು ಮತ್ತು ₹ 20,000 ವಿಸರ್ಜನಾ ವೆಚ್ಚಗಳನ್ನು ಪಾವತಿಸಲು ಸಾಕಾಗುತ್ತದೆ ) ಮತ್ತು ಬಾಕಿ ₹ 9,00,000 ಗಳನ್ನು ತಲಾ ₹ 10 ರ, ತಲಾ ₹ 7.50 ಪಾವತಿಸಿದ ಲಕ್ಷ್ಮಿ ಲಿಮಿಟೆಡ್‌ನ 1,20,000 ಷೇರುಗಳನ್ನು ಮಂಗಳಾ ಲಿಮಿಟೆಡ್‌ನ ಷೇರುದಾರರಿಗೆ ಹಂಚಿತು.

ಮಂಗಳಾ ಲಿಮಿಟೆಡ್ ಪುಸ್ತಕಗಳಲ್ಲಿ ಅಗತ್ಯವಾದ ಲೆಡ್ಜರ್ ಖಾತೆಗಳನ್ನು ತಯಾರಿಸಿ.

10. ಪಿ ಕಂಪನಿಯ ಅಢಾವೆ ಪತ್ರ 31-3-22 ರಂದು ಈ ಕೆಳಗಿನಂತಿದೆ :

| ಜವಾಬ್ದಾರಿಗಳು | ₹ | ಆಸ್ತಿಗಳು | ₹ |
|---|---|---|---|
| ತಲಾ ₹ 100ರ, 19,000 | | ಭೂಮಿ ಮತ್ತು ಕಟ್ಟಡಗಳು | 1,00,000 |
| ಸೌಮ್ಯ ಷೇರುಗಳು | 19,00,000 | ಯಂತ್ರೋಪಕರಣಗಳು | 2,80,000 |
| ಸಾಲಪತ್ರಗಳು | 1,00,000 | ದಾಸ್ತಾನು | 3,70,000 |
| ಸಾಲಿಗರು | 1,00,000 | ಒಟ್ಟು ಋಣಿಗಳು | 1,80,000 |
| | | ಸದ್ಭಾವನೆ | 2,00,000 |
| | | ಲಾಭ-ನಷ್ಟ ಖಾತೆ | 9,70,000 |
| | **21,00,000** | | **21,00,000** |

ಕಂಪನಿಯನ್ನು ಈ ಕೆಳಗಿನಂತೆ ಪುನರ್ನಿರ್ಮಿಸಬೇಕು :

a) ₹ 100ರ ಷೇರುಗಳನ್ನು ತಲಾ ₹ 40 ರಷ್ಟು ಪೂರ್ಣ ಪಾವತಿಸಿದ ಷೇರುಗಳ ಸಮಾನ ಸಂಖ್ಯೆಗೆ ಇಳಿಸಬೇಕು.

b) ಸಾಲಪತ್ರಗಳು ಹೊಂದಿರುವವರಿಗೆ ಪೂರ್ಣ ಪ್ರಮಾಣದಲ್ಲಿ ಪಾವತಿಸಲಾದ ತಲಾ ₹ 40 ರ, 1000 ಹೊಸ ಷೇರುಗಳನ್ನು ಪೂರ್ಣ ಇತ್ಯರ್ಥದಲ್ಲಿ ವಿತರಿಸುವುದು.

c) ಲಭ್ಯವಿರುವ ಮೊತ್ತವನ್ನು ಸದ್ಭಾವನೆ ಮತ್ತು ಲಾಭ-ನಷ್ಟ ಖಾತೆ ಕಡಿಮೆ ಮಾಡಲು ಮತ್ತು ಉಳಿಕೆಯನ್ನು ಯಂತ್ರೋಪಕರಣಗಳ ಮೌಲ್ಯವನ್ನು ಕಡಿಮೆ ಮಾಡಲು ಬಳಸಬೇಕು.

d) ಕಂಪನಿಯ ಅಧಿಕೃತ ಬಂಡವಾಳವು ತಲಾ ₹ 100 ರ, 20,000ಷೇರುಗಳನ್ನು ಹೊಂದಿದೆ. .

ಅಗತ್ಯವಾದ ರೋಜು ದಾಖಲೆಗಳನ್ನು ಬರೆಯಿರಿ. ಪುನರ್ನಿರ್ಮಿಸಿದ ಅಢಾವೆ ಪತ್ರ ತಯಾರಿಸಿರಿ.

11. ಎಕ್ಸ್ ಲಿಮಿಟೆಡ್‌ನ ಬಂಡವಾಳ ಈ ಕೆಳಕಂಡಂತಿತ್ತು :

ತಲಾ ₹ 100ರ ಸಂಪೂರ್ಣವಾಗಿ ಪಾವತಿಸಿದ 4,000 ಸಾಮಾನ್ಯ ಷೇರುಗಳು.

ತಲಾ ₹ 100ರ ₹ 80 ಪಾವತಿಸಿದ 3,000 ಸಾಮಾನ್ಯ ಷೇರುಗಳು.

ತಲಾ ₹ 100ರ ಸಂಪೂರ್ಣವಾಗಿ ಪಾವತಿಸಿದ 1,000 ಆದ್ಯತೆಯ ಷೇರುಗಳು.

ವಿವಿಧ ಸಾಲಿಗರು ₹ 1,00,000. ಇದರಲ್ಲಿ ₹ 30,000 ಮೌಲ್ಯದ ಸುರಕ್ಷಿತ ಸಾಲಿಗರು ಸೇರಿದ್ದಾರೆ. ವಿಸರ್ಜನಾಧಿಕಾರಿಗಳ ಸಂಭಾವನೆಯು ₹ 2,500. ವಿಸರ್ಜನಾಧಿಕಾರಿಗಳು ಭಾಗಶಃ ಪಾವತಿಸಲಾದ ಸಾಮಾನ್ಯ ಷೇರುಗಳ ಮೇಲೆ ₹ 15/- ಷೇರಿಗೆ ಕರೆ ಮಾಡಿದರು, ಅದನ್ನು ಸಂಪೂರ್ಣವಾಗಿ ಪಾವತಿಸಲಾಯಿತು. ಅವರು ₹ 2,91,000 ಮೌಲ್ಯಕ್ಕೆ ಎಲ್ಲಾ ಆಸ್ತಿಗಳನ್ನು ಮಾರಿದರು.

ಷೇರುದಾರರಿಗೆ ಸಿಗುವ ಪಾಲನ್ನು ತೋರಿಸುತ್ತ ವಿಸರ್ಜನಾಧಿಕಾರಿಯ ಅಂತಿಮ ವಿವರಣಾ ಪಟ್ಟಿಯನ್ನು ಸಿದ್ಧಪಡಿಸಿ.